

ಔಷಧಿ ನೀಡಿದ. ರಾಜ ಔಷಧಿಯನ್ನು ಕೈಗೆತ್ತಿಕೊಂಡು ಯೋಚಿಸಲಾರಂಭಿಸಿದ. ಆಗ ಅವನಿಗೆ ಮೂರನೇ ಮುತ್ತಿನಂಥ ಮಾತು ಮಿಂಚಿನಂತೆ ನೆನಪಾಯಿತು. ‘ಹಿತ ಶತ್ರುಗಳೆದುರು ಯೋಚಿಸದೇ ಏನನ್ನೂ ಮಾಡದಿರು.’ ರಾಜನ ತಲೆಯಲ್ಲಿ ಗೊಂದಲಗಳ ಸರಮಾಲೆ ಶುರುವಾಯಿತು.

ಆತ ಕೈಯಲ್ಲಿದ್ದ ಪೇಯವನ್ನು ಕುಡಿಯದೇ ಕ್ಷಣ ಯೋಚಿಸುತ್ತ ಸುಮ್ಮನೇ ನಿಂತ. ಎದುರು ನಿಂತಿದ್ದ ಮಂತ್ರಿಗೆ ಭಯವಾಗತೊಡಗಿತು. ರಾಜನಿಗೆ ಗೊತ್ತಾಯಿತೇ? ಎಂದು ವೈದ್ಯನಿಗೂ ನಡುಕವುಂಟಾಯಿತು. ರಾಜ ಇಬ್ಬರ ಮುಖಗಳಲ್ಲಿನ ಭಯವನ್ನು ಗುರುತಿಸಿದ. ಅನುಮಾನ ದ್ವಿಗುಣವಾಯಿತು. ಮಂತ್ರಿ ಮತ್ತು ವೈದ್ಯ ಭಯದಿಂದ ನಡುಗಲಾರಂಭಿಸಿದರು. ಇನ್ನು ತಡ ಮಾಡಿದರೆ ತಮ್ಮ ಪ್ರಾಣ ಉಳಿಯದೆಂದು ಭಯದಿಂದ ಇಬ್ಬರೂ ಅರಸನ ಕಾಲಿಗೆ ಬಿದ್ದರು. ರಾಜ ಅವರನ್ನು ನೋಡುತ್ತ ಸುಮ್ಮನೇ ನಿಂತೇ ಇದ್ದ. ‘ನಮ್ಮನ್ನು ಕ್ಷಮಿಸಿ. ಇನ್ನೆಂದೂ ಇಂತಹ ಆಲೋಚನೆ ಮಾಡುವುದಿಲ್ಲ’ ಎಂದ ಮಂತ್ರಿ. ‘ನನ್ನದೇನೂ ತಪ್ಪಿಲ್ಲ, ನನಗೆ ಶಿಕ್ಷೆ ಕೊಡಬೇಡಿ. ಮಂತ್ರಿಗಳು ಜೀವಭಯ ಹಾಕಿದ್ದಕ್ಕೆ ನಾನು ಇದನ್ನು ಮಾಡಬೇಕಾಯಿತು’ ಎಂದ ವೈದ್ಯ. ಅರಸನು ವೈದ್ಯನನ್ನು ಕ್ಷಮಿಸಿ, ಮಂತ್ರಿಯನ್ನು ಕಾರಾಗೃಹಕ್ಕೆ ನೂಕಿದ. ತಪಸ್ವಿಗಳ ಮೂರು ಮುತ್ತಿನಂಥ ಮಾತುಗಳು ಅರಸನ ಪ್ರಾಣವನ್ನು ಉಳಿಸಿದ್ದವು.